Regd. No. M 1299 SATYAVADI Founded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸೆಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 20 | ಶನಿವಾರ 21—9—46 | ಬಿಡಿ ಪ್ರತಿ 3 ಪೈ

ಮದ್ರಾಸು ಸರ್ಕಾರ ಆಹಾರ ಪೊಟ್ಟಣ ಕೊಳ್ಳಲಿದೆ

ಅಮೆರಿಕದಿಂದ ಸುಮಾರು 2 ಲಕ್ಷ ರೂಪಾಯಿ ಬೆಲೆಬಾಳುವ ಡಿನ್ನರ್ ಪೆಕೆಟುಗಳನ್ನು ಕೊಂಡು ಕೊಳ್ಳುವ ಅಲೋಚನೆ ಮದ್ರಾಸು ಸರಕಾರಕ್ಕಿದೆ. ಈ ಪೇಕೆಟಿನಲ್ಲಿ ಇಬ್ಬರಿಗೆ ಸಾಕಾಗುವಷ್ಟು ಅಕ್ಕಿ ಮತ್ತು ಕಾಯಿ ಪಲ್ಯ ಇರುತ್ತದೆ. ಒಂದೊಂದು ಪೇಕೆಟಿನ ಬೆಲೆ 5 ಆಣೆಯಷ್ಟಾಗುತ್ತದೆ.

ಅವಳು ಹದಿನೈದು ವರ್ಷ ಪತಿಯೊಡನೆ ಮಾತಾಡಲಿಲ್ಲ

ಇಂಗ್ಲಾಂಡಿನ ಕೆಂಟ ಪ್ರಾಂತ್ಯದಲ್ಲಿ ಒಂದು ಗ್ರಾಮದಲ್ಲಿ ಫ್ಲಾರೆನ್ಸು ಕ್ಲೇರ್ ಅಡಂ ಎಂಬುವ ಒಬ್ಬ ಹೆಣ್ಣು ಮಗಳು ಹೋದವಾರ ತೀರಿಕೊಂಡಳು. ಆಕೆ 15 ವರ್ಷಗಳ ಹಿಂದೆ ಗಂಡನೊಡನೆ ಯಾವ ಕಾರಣಕ್ಕೋ ಗದ್ದಾಡಿ ಮಾತು ಬಿಟ್ಟಿದ್ದಳು. ಅಂದಿನಿಂದ ಅವಳು ತನ್ನ ವಾಸಗುವ ಕೋಣೆಯಲ್ಲಿಯೇ ಇದ್ದು ಯಾರನ್ನೂ ಆ ಕೊಟಡಿಗೆ ಬಾರದಂತೆ ನೋಡಿಕೊಂಡಿದ್ದಳು.

ತನಗೆ ಬೇಕಾಗುವ ಆಹಾರ ಪದಾರ್ಥಗಳಿಗಾಗಿ ಒಂದು ಚೀಟಿಯನ್ನು ಬರೆದು ಕೋಣೆಯ ಹೊರಗಿನ ಒಂದು ಗೂಡಿನಲ್ಲಿ ಇಟ್ಟು ಅದೇಗೂಡಿನ ಮೂಲಕ ಅವುಗಳನ್ನು ಪಡೆಯುತ್ತಿದ್ದಳು. ಶೌಚ ಮುಂತಾದ ನಿತ್ಯಕರ್ಮಗಳನ್ನು ಒಂದು ಬಕೆಟ್ ಹಾಕಿಕೊಂಡು ರಾತ್ರಿ ಹೊತ್ತಿನಲ್ಲಿ ಹೊರಕ್ಕೆ ಬಂದು ತೀರಿಸಿಕೊಳ್ಳುತ್ತಿದ್ದಳು.

ಈ ಹದಿನೈದು ವರ್ಷ ಅವಳು ಯಾರ ಸಂಗಡವೂ ಮಾತಾಡಲಿಲ್ಲ. ಸೇವಕರಾಗಲಿ ಗಂಡನಾಗಲಿ ಅವಳ ಮುಖವನ್ನೇ ನೋಡಲಿಕ್ಕೆ ಅವಕಾಶ ಕೊಡಲಿಲ್ಲ. ಜರ್ಮನ್ ವಿಮಾನ ಧಾಳಿಯಲ್ಲಿ ಆ ಕೋಣೆಯ ಮಾಳಿಗೆ ಬಿದ್ದು ಅದನ್ನು ರಿಪೇರಿ ಮಾಡುವಾಗ್ಗೆ ಅಕೆಯು ಆ ಕೋಣೆಯ

ಉಗ್ರ ಪ್ರವಾಹ

ಪಾಕ್ನಾದ ಬಳಿ ಇರುವ ಗಯಾ ಎಂಬಲ್ಲಿಯ ಫಲ್ಗು ನದಿಯಲ್ಲಿ ಉಗ್ರ ನೆರೆ ಉಂಟಾಗಿ ಮೊನ್ನೆ ನೂರು ಮಂದಿ ಕೊಚ್ಚಿ ಹೋದರು.

ಮಹಮದ ಪೈಗಂಬರರ ಕೇಶದ ಕಳವು

ಟರ್ಕಿಯಲ್ಲಿ ಪ್ರತಿಯೊಂದು ಮಸೀತಿಜುಲ್ಲಿ ಮಹಮದ ಪೈಗಂಬರರ ಗಡ್ಡದ ಕೇಶವೊಂದನ್ನೊಳಗೊಂಡ ಭಂಗಾರ ಭರಣಿಯಿದ್ದೂ ಅದನ್ನು ಮುಸಲ್ಮಾನರೆಲ್ಲರೂ ಬಹು ಭಕ್ತಿಯಿಂದ ನೋಡಿಕೊಳ್ಳುತ್ತಿರುವರು. ಇಸ್ತಾಂಬಲ್ಲಿನ ಒಂದು ಮಸೀದಿಯ ಅಂತಹ ಭರಣಿಯು ಕಳವಾಗಿರುವುದರಿಂದ ಅಲ್ಲಿಯ ಮುಸಲ್ಮಾನರಿಗೆಲ್ಲಾ ಜಹಳ ಕಳವಳವಾಗಿ ತಳಮಳಿಸುತ್ತಿರುವರು. ಪೋಲಿಸರ ಶೋಧವು ನಡೆದಿರುವುದು.

ಗೌರ್ನರರಿಗೆ ಡಿಗ್ರಿ ರದ್ದು

1944 ರಲ್ಲಿ ಆಗ್ರ ಯುನಿವರ್ಸಿಟಿಯು ಸಂಯುಕ್ತ ಪ್ರಾಂತದ ಗವರ್ನರರಾದ ಸರ್ ಮಾರಿಸ್ ಹ್ಯಾಲೆಟ್ಟರಿಗೆ ಡಾಕ್ಟರ್ ಆಫ್ ಲಿಟರೇಚರ್ಸ್ ಎಂಬುವ ಗೌರವಾರ್ಥ ಪದವಿಯನ್ನು ಕೊಟ್ಟಿತ್ತು. ಆದರೆ ಅವರು 2 ವರ್ಷ ಅಸಹನೀಯ ಮತ್ತು ಖಂಡನಾರ್ಹ ನಡವಳಿಕೆ ಸ್ಯಾಂಡಲಸ್ ಕಾಂಡೆಕ್ಟು ನಿಂದ ಪ್ರಾಂತವನ್ನು ಆಳಿದ್ದರಿಂದ ಇವರಿಗೆ ಕೊಟ್ಟಿರುವ ಈ ಪದವಿಯನ್ನು ವಾಪಸು ತೆಗೆದುಕೊಂಡು ರದ್ದು ಪಡಿಸಬೇಕೆಂದು ಸೆನೆಟ್ಟು ಸದಸ್ಯರಾದ ಶ್ರೀ ವೆಂಕಟೇಶ ನಾರಾಯಣತಿವಾರಿ ಎಂಬುವರು ಒಂದು ಗೊತ್ತುವಳಿಯನ್ನು ಸೆನೆಟ್ಟದಲ್ಲಿ ಮಂಡಿಸಿರುವರು ಇದು ಬೇಗನೆ ಚರ್ಚೆಗೆ ಬರಲಿದೆ.

ಒಂದು ಮೂಲೆಯಲ್ಲಿ ಕುಳಿತು ಕೊಳ್ಳುತ್ತಿದ್ದಳಂತೆ.

ಮಹಾ ಯುದ್ಧಕ್ಕೆ ರಷ್ಯಾ ಸಿದ್ಧವಾಗಿಲ್ಲ

ಗ್ರೀಸಿನ ರಾಜರು

ಅಥೆನ್ಸು ಸೆ 19 — ಗ್ರೀಸಿನ ರಾಜರು ಏಳಾರು ದಿನಗಳಲ್ಲಿ ಇಲ್ಲಿಗೆ ಬರುವರು.

ಸಮಾವೇಶ

ನವದೆಹಲಿ ಸೆ 19 — ಭಾವಾವಾರು ಪ್ರಾಂತ ರಚನೆಯ ಮೊಟ್ಟ ಮೊದಲನೇ ಸಮ್ಮೇಳನ ಡೆಲ್ಲಿಯಲ್ಲಿ ಸೇರಬೇಕೆಂದು ಡಾ || ಪಟ್ಟಾಭಿ ಹೇಳಿದ್ದಾರೆ.

ಪಂಡಿತ ನೆಹರು

ಏಷ್ಯಾ ರಾಜ್ಯಗಳಿಲ್ಲದರ ಸಮ್ಮೇಳನದ ಕಾರ್ಯಕಾರಿ ಅಧ್ಯಕ್ಷತೆಯನ್ನು ಜವಾಹರರು ವಹಿಸುವರು.

ಚಿರಾಲಾ ಐ. ಎಲ್. ಟಿ. ಡಿ. ಕಾರ್ಖಾನೆಯಲ್ಲಿ ಮುಷ್ಕರ

ಚಿರಾಲಾ ಐ. ಎಲ್. ಟಿ. ಡಿ ಕಾರ್ಖಾನೆಯಲ್ಲಿ ಓರ್ವ ಮಜೂರನನ್ನೂ ಕೆಲಸದಿಂದ ತೆಗೆದು ಹಾಕಿದುದಕ್ಕೆ 3000 ಮಂದಿ ಕೆಲಸಗಾರರು ಮುಷ್ಕರ ಹೂಡಿದರು.

ಸಿಂಧಿನಲ್ಲಿ ಚುನಾವಣೆ

ಕರಾಚಿ ಸೆ 19 — ಸಿಂಧ್ ಶಾಸನ ಸಭಾ ಚುನಾವಣೆಯು ಡಿಸಂಬರ್ 2 ಕ್ಕೆ ನಡೆಯುವುದು.

ರಷ್ಯಾ ಯುದ್ಧಕ್ಕೆ ಸಿದ್ಧವಿಲ್ಲ

ನ್ಯೂಯಾರ್ಕ್ ಸೆ 20 — ರಷ್ಯವು ರಕ್ಷಣೆ ಮತ್ತು ಭದ್ರತೆಗಾಗಿ ಮಾಡುತ್ತಿರುವ ಯೋಜನೆಗಳನ್ನು ಕುರಿತು ಪ್ರೊ || ಲಾಸ್ಕಿ ಅವರ ಪರ ವಹಿಸಿ ಮಾತನಾಡುತ್ತಾ ಇವುಗಳಿಂದ ರಷ್ಯಾ ಯುದ್ಧಕ್ಕೆ ಸಿದ್ಧವಾಗುತ್ತಿದೆಯೆಂದು ಹೇಳುವುದು ತಪ್ಪೆಂದು ಅಭಿಪ್ರಾಯಪಟ್ಟಿರುವರು.

ಎರ್ನಾಕುಲಂ ಸೆ 19 — ಭಾರತ ಆಹಾರ ಸದಸ್ಯರಾದ ಶ್ರೀ ರಾಜೇಂದ್ರ ಪ್ರಸಾದರು ಅಕ್ಟೋಬರಿನಲ್ಲಿ ಕೊಚ್ಚಿಗೆ ಬಂದಾಗ ಪೌರಸಭೆ ವಿಜ್ಞಾಪನಾ ಪತ್ರ ಅರ್ಪಿಸಬೇಕೆಂದು ನಿರ್ಧರಿಸಲಾಗಿದೆ.

ಕಲ್ಕತ್ತಾ ಸೆ 19 — ಕಲ್ಕತ್ತಾದಲ್ಲಿ ದ ಗಲಭೆಗಾಗಿ ಅಲ್ಲಿಯ ಮಂತ್ರಿಮಂಡಲದ ಮೇಲೆ ಅವಿಶ್ವಾಸ ಠರಾವನ್ನು ಕಾಂಗ್ರೆಸ್ ಪಾರ್ಟಿಯವರು ಶಾಸನ ಸಭೆಯಲ್ಲಿ ತಂದಿರುವರು. ಇದರ ಚರ್ಚೆಗೆ 2 ದಿನಗಳೆಡಲ್ಪಟ್ಟಿವೆ.

ವಾರ್ತೆಗಳು

ಬರ್ಮಾದಲ್ಲಿ ಸಂಪು ಹೂಡಿದ್ದ 3500 ಪೋಲೀಸರು ವಜವಾದರು.

ಮುಂದಿನ ಮಾಹೆ 14 ಮತ್ತು 15 ರಲ್ಲಿ ಜಗ್ಜೀವನ ರಾಂ ಅಧ್ಯಕ್ಷತೆಯಲ್ಲಿ ಭಾರತದ ಎಲ್ಲಾ ಕಾರ್ಮಿಕ ಸಚಿವ ಸಮಾವೇಶ ಡೆಲ್ಲಿಯಲ್ಲಿ ಸೇರುವುದು.

ಭಾರತಕ್ಕೆ ಆಹಾರ ದೊರಕಿಸಿಕೊಳ್ಳುವ ಸಲುವಾಗಿ ರಷ್ಯಾಕ್ಕೆ ಆಹಾರ ಪ್ರತಿನಿಧ್ಯ ಹೋಗಲಿದೆ.

ಡಾಕಾ ಸೆ, 19 — ಡಕ್ಕಾದಲ್ಲಿ ಇನ್ನೂ ಇರಿತಗಳು ನಡೆಯುತ್ತಲೇ ಇದೆ. ಒಂದು ತಿಂಗಳಲ್ಲಿ 47 ಜನ ಸತ್ತಿರುವರು.

ಪೇರೀಸ್, ಸೆ 20 — ಕೆಲವು ದಿವಸಗಳಿಂದ ಸ್ಪೇನಿನ ಫ್ರಾಂಕೋ ಸೇನಿಕರು ಗುಪ್ತವಾಗಿ ಕವಾತು ನಡೆಸುತ್ತಿರುವರು.

ಬಳ್ಳಾರಿ ಸೆ 19 — ಯಾಲ್ಲಿ ಹಳ್ಳಿಯಿಂದ 20 ಸಾವಿರ ರೂ. ಬೆಳ್ಳಿ ನಾಣ್ಯಗಳು ಕಳುವಾಗಿರುವುದಾಗಿ ತಿಳಿಯಬಂದಿದೆ.

ಮದರಾಸು ಸೆ 20 — ಹರಿಜನ ವಾರವು ಈ ತಾ || 24 ರಿಂದ ಅಕ್ಟೋಬರ್ 2 ರವರೆಗೆ ಆಚರಿಸಲಾಗುವುದು.

ಮದರಾಸು ಸೆ 20 — ಮದರಾಸಿಗೆ ಮತ್ತಷ್ಟು ಬ್ರೆಜಿಲ್ ಅಕ್ಕಿ ಬರುವ ನಿರೀಕ್ಷಣೆ ಇದೆ.

ಲಾಹೋರು ಸೆ 19 — ರಾಜ್ಯಾಂಗ ರಚನಾ ಸಭಾ ಸದಸ್ಯರಿಗೆ ಹೊಸ ವೋಟಾರು ಕಾರು ತೆಗೆದುಕೊಳ್ಳಲು ಸರ್ಕಿಟ್ಟುಗಳು ಕೊಡಲಾಗುವುದೆಂದು ಹೇಳಲಾಗಿದೆ.

ಟೋಕಿಯೋ ಸೆ 20 — ಯುದ್ಧ ಪಾತಕಿಗಳ ವಿಚಾರಣೆಯಲ್ಲಿ ಪ್ರಮುಖ ಪ್ರಾಸಿಕ್ಯೂಷನ್ ಸಾಕ್ಷಿ ಲೆ || ಜ || ಟಾಟ್ಸುಮಿಕುಸಾಬ ಎಂಬಾತನು ಆತ್ಮಹತ್ಯೆ ಮಾಡಿಕೊಂಡನು.

ಕಲ್ಕತ್ತಾ ಸೆ 20 — ಠರಾವು ಬಿಬಿದ್ದುಜೋಯಿತು.

ಅಭಿನವ ಟಾರ್ಜಾನ್

15 ವರ್ಷ ವಯಸ್ಸಿನ ಹುಡುಗ ಜಿಂಕೆಯ ಜೇಷ್ಟೆಗಳು; ಜಿಂಕೆಯಂತೆ ಓಡುತ್ತಾನೆ. ಜಿಂಕೆಯಂತೆ ಶಬ್ದಮಾಡುತ್ತಾನೆ ಹುಲ್ಲಿನ ವಿನಃ ಬೇರೆ ಏನನ್ನೂ ತಿನ್ನುವುದಿಲ್ಲ. ಗಂಟೆಗೆ 50 ಮೈಲಿ ಓಡುತ್ತಾನೆ — ಇದು ಟ್ರಾನ್ಸ್ವಾಲ್ ಮರುಭೂಮಿಯಲ್ಲಿ ಜಿಂಕೆಗಳ ಗುಂಪಿನಲ್ಲಿ ಬೆಳೆದ ಹುಡುಗನ ಕಥೆ.

ಪೌರಸಭೆ ಹೋಟಲು

ಮೈಸೂರಿಗೆ ದಸರಾ ಮಹೋತ್ಸವಕ್ಕಾಗಿ ಬರುವ ಹೊರಗಿನವರಿಗೆ ಹೆಚ್ಚು ಖರ್ಚಿಲ್ಲದೆ ಸಾಧಾರಣ ಬೆಲೆಗೆ ಊಟ ಸಿಕ್ಕುವುದಕ್ಕಾಗಿ ಹಿಂದಿ ಜೀವಣ್ಣರಾಯನ ಕಟ್ಟೆ ಇದ್ದ ಸ್ಥಳದಲ್ಲಿ ಮುನಿಸಿಪಾಲಿಟಿಯ ನೇತೃತ್ವದಲ್ಲಿ ಒಂದು ಹೋಟಲು ತೆರೆಯಲ್ಪಡುವುದೆಂದು ವರ್ತಮಾನ.

ರೂಸ್ವೆಲ್ಟರ ಸ್ಟಾಂಪುಗಳು

ಗತಿಸಿ ಹೋದ ಅಮೇರಿಕದ ಅಧ್ಯಕ್ಷ ರೂಸ್ವೆಲ್ಟರ ಸ್ಟೆಂಪ್ ಸಂಗ್ರಹವನ್ನು ಮೂರಿ 80000 ಪವನ್ನುಗಳಷ್ಟು ಸಂಗ್ರಹವಾಗಿದೆ.

ಚಳಿ ಜ್ವರಕ್ಕೆ

ಉಚಿತವಾಗಿ ಔಷಧವನ್ನು

ಕೊಡಲಾಗುವುದು.

ಆ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್‌ಬಜಾರ್, ಮೈಸೂರ

For Good Printing

L. N. Press

Sriramp et, MYSORE

ಪೆನ್ಸಿಲಿನ್ ಇಂಜಕ್ಷನ್ನುಗಳು

ಬಳ್ಳಾರಿಯಲ್ಲಿ ಓರ್ವ ತರುಣ ವಕೀಲರ ಚಪ್ಪಲಿ ಕಚ್ಚಿದ ಗಾಯವನ್ನು ಗುಣಪಡಿಸಲಿಕ್ಕೆ ಬಳ್ಳಾರಿ ಜನರಲ್ ಆಸ್ಪತ್ರೆಯಲ್ಲಿ ಇದೇ ತಿಂಗಳ 10 ದಿನಗಳಲ್ಲಿ 32 ಪೆನ್ಸಿಲಿನ್ ಇಂಜಕ್ಷನ್‌ಗಳು ಕೊಡಲ್ಪಟ್ಟವು. - ಇದು ಗಾಯದ ಕಾಠಿಣ್ಯತೆಯೋ ಅಥವಾ ವಿಶೇಷ ಪ್ರಚಾರ ಹೊಂದಿದ ಪೆನ್ಸಿಲಿನ್ 'ಸಂಜೀವಿನಿ' ಔಷಧದ ಗುಣಪಡಿಸುವ ಪ್ರಭಾವವೋ ತಿಳಿಯದು.

(ನ ಸಂ)

ಭಾರತದ ಆಹಾರ ಪರಿಸ್ಥಿತಿ ವಿಷಮಿಸಿದೆ

ನವದೆಹಲಿ ಸೆ 18 — ಭಾರತದ ಆಹಾರ ಪರಿಸ್ಥಿತಿ ಅತ್ಯುಗ್ರವಾಗಿದೆ. ಆ ಉಗ್ರ ಪರಿಸ್ಥಿತಿಯನ್ನು ಮುರಿಯಲು ಡಾ| ರಾಜೇಂದ್ರಬಾಬು ಶ್ರಮಿಸುತ್ತಿರುವರು.

At Ranjit

3rd Houseful Week

Anmol Ghadi

ನೂರ್‌ಜಹಾನ್ — ಸುರೇಂದ್ರ

ಜಹರ್ ರಾಜಾ — ಸುರಿಯ

ಪಾತ್ರವಹಿಸಿರುವ

ಅನ್ಮೋಲ್ ಘಡಿ

(ಅಮೂಲ್ಯ ಗಡಿಯಾರ)

Edited, Printed and Published by M. S. Krishna Rao at the Satyavadi Press, Chamaraja Agrahar, Mysore,

At Opera ⁼⁼ From 20-9-46

CHOW - CHOW

* ಎನ್. ಎಸ್. ಕೃಷ್ಣನ್ * ಟಿ. ಎ. ಮಧುರಂ * ಕಾಳಿಯನ್ ರತ್ನಂ

* ದೊರೆರಾಜ್ * ರಾಜಕಾಂತಂ ಪಾತ್ರವಹಿಸಿರುವ

ಚೌ ಚೌ

Office of the President
City Municipal Council Mysore
Dated 13 th September 1946

No M 5 C 147–56/46-7

NOTIFICATION

It is hereby notified for the information of the inhabitants of the Mysore City Municipality that the Municipal Council have resolved to amend the existing octroi byelaws framed under Section 51 (i) K and 64 Praviso (a) (ii) of the Mysore City Municipalities Act, as noted below —

Any person having any objection in respect of the proposed amendment may prefer the same in writing to the undersigned with in a month from this date after which no objection will be received.

Chapter XI

Octroi Byelaws approved in G. O. No. L. 10361–2/MI 106-45–36 dated 5-4-46

Amendment proposed —

Add under exemptions as serial No 31, the following

" The consignment of sugar imported by Government for transport to outside places "

(Sd) **R. Ramachandra Rao Bhombore**
President

ಶಕ್ತಿ ಸುಧಾ

ರಕ್ತವೃದ್ಧಿಗೆ, ಧಾತು ಪುಷ್ಟಿಗೆ ಸಂಜೀವನ

ನಿಸ್ಸಾರವಾದ, ನಶಿಸುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿಸುಧಾ, 1067 ಚಾಮರಾಜಪುರಂ, ಮೈಸೂರು

SHAKTI SUDHA

For Rich Blood, Strong Nerves & Exuberant Vitality